

ಸೋಫಿಯಾ ನಗರದ ಕಿರೀಟಪ್ರಾಯ ಅಲೆಕ್ಸಾಂಡರ್ ನೆವ್ಸ್ಕಿ ಕ್ಯಾಥೆಡ್ರಿಲ್



ರೋಮನ್ನರ ಕಾಲದ ಆಂಫಿಥಿಯೇಟರ್

ಕೂಡ ಈ ದೇಶ ಆಳಿದ್ದಾರೆ. ಬಹಳಷ್ಟು ಜನರು ಈ ಪುಟ್ಟ ದೇಶದ ಮೇಲೆ ದಂಡೆತ್ತಿ ಬಂದಿದ್ದಾರೆ.

## ಪರ್ವತದ ತಪ್ಪಲಿನ ಸುಂದರ ನಗರ

ಬಲ್ಗೇರಿಯಾ ರಾಜಧಾನಿ ಸೋಫಿಯಾ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದೆ. ಇದು ಸೋಫಿಯಾ ವಿಟೋಷ ಎನ್ನುವ ಪರ್ವತದ ತಪ್ಪಲಿನಲ್ಲಿ ಕಟ್ಟಲಾದ ನಗರ. ಹೀಗಾಗಿ ನಗರದ ಮಧ್ಯೆ ನಿಂತು ಹಿಮಚ್ಛಾದಿತ ಪರ್ವತಶಿಖರಗಳನ್ನು ನೋಡಬಹುದು. ಬೇಸಿಗೆಯಲ್ಲಿ ಇಲ್ಲಿನ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ವರೆಗೆ ತಲಪುತ್ತದೆ.

ಹಗಿಯ ಸೋಫಿಯಾ ಎನ್ನುವುದು ರಾಜಧಾನಿಯ ಅತ್ಯಂತ ಪುರಾತನ (4ನೇ ಶತಮಾನ) ಚರ್ಚ್. ಇಟಲಿಯಲ್ಲಿ ಹುಟ್ಟಿದ ಸಂತಳಾದ ಸೋಫಿಯಾ ಸ್ಮರಣಾರ್ಥ ನಿರ್ಮಿಸಿದ ಈ ಚರ್ಚ್‌ನ ಅವಶೇಷಗಳನ್ನು ಈಗಲೂ ನೋಡಬಹುದು. ಸೋಫಿಯಾದಲ್ಲಿ ಅತ್ಯಂತ ಪ್ರಸಿದ್ಧವಾದ ಅಲೆಕ್ಸಾಂಡರ್ ನೆವ್ಸ್ಕಿ ಕ್ಯಾಥೆಡ್ರಿಲ್ ಇದೆ. ಇದು ಬಲ್ಗೇರಿಯನ್ ಬಿಷಪ್ಪರ ಆಡಳಿತಕ್ಕೆ ಒಳಪಟ್ಟಿದೆ. ಬಲ್ಗೇರಿಯಾವನ್ನು ಒಟ್ಟೊಮಾನ್‌ರ ಅಧಿಪತ್ಯದಿಂದ ಬಿಡುಗಡೆಗೊಳಿಸಲು 1877–78ರಲ್ಲಿ ಹೋರಾಡಿ ಮಡಿದ 2 ಲಕ್ಷ ರಷ್ಯನ್ ಸೈನಿಕರ ನೆನಪಿಗಾಗಿ ಇದನ್ನು ಕಟ್ಟಲಾಗಿದೆ. 1882–1912 ಕಾಲದ ಬೃಹತ್ ಕಟ್ಟಡವಿದು. 13ನೇ ಶತಮಾನದ ರಷ್ಯನ್ ವೀರ ರಾಜಕುಮಾರನನ್ನು ಸ್ಮರಿಸಿ ಈ ಕ್ಯಾಥೆಡ್ರಿಲ್‌ಗೆ ಆತನ ಹೆಸರಿಡಲಾಗಿದೆ. ನಗರದ ನಡುವೆ ಧುತ್ತನೆ ಎದುರಾಗುವ, ಅಗಾಧ ಎತ್ತರದ ಈ ಕಟ್ಟಡ ಚಿನ್ನದ ಬಣ್ಣದ ಬುರುಜುಗಳಿಂದ ಜಗಮಗಿಸುತ್ತದೆ.

ಈ ಬೃಹತ್ ಕಟ್ಟಡವನ್ನು ರಷ್ಯನ್ನರ ಶೈಲಿಯಲ್ಲಿ ಕಟ್ಟಲಾಗಿದೆ. ಚೆಂದದ ಬೃಹತ್ ಬಾಗಿಲುಗಳಿಂದ ಒಳನಡೆದರೆ, ಸಾಂಬ್ರಾಣಿ–ಊದುಬತ್ತಿ ಸುಗಂಧದೊಂದಿಗೆ ಒಳಾಂಗಳ ತೆರೆದುಕೊಳ್ಳುತ್ತದೆ. ದೈತ್ಯಗಾತ್ರದ ತೂಗುದೀಪಗಳು ನಮ್ಮನ್ನು ಮತ್ತಷ್ಟು ಕುಬ್ಜರನ್ನಾಗಿಸುತ್ತವೆ. ಒಳಗಿರುವ ಮೂರು ಗುಡಿಗಳಲ್ಲಿಯೂ ಪಾದ್ರಿಗಳು ಪೂಜೆ ಸಲ್ಲಿಸುತ್ತಾರೆ.

## ಬೊಯಾನ ಚರ್ಚ್

ಇದು ಸೋಫಿಯಾದಲ್ಲಿರುವ ಅಪ್ಪಟ ಬಲ್ಗೇರಿಯನ್ ಶೈಲಿಯ 90 ಮ್ಯೂರಲ್‌ಗಳಿರುವ 13ನೇ ಶತಮಾನದ ಚರ್ಚ್. ಯುನೆಸ್ಕೊ ಈ ಚರ್ಚನ್ನು ಸಂರಕ್ಷಿತ ಜಾಗವೆಂದು ಘೋಷಿಸಿದೆ. ಅತ್ಯಂತ ಸಣ್ಣ ಕಟ್ಟಡವಿದು. ಗೋಡೆಗಳ ಮೇಲಿರುವ ಪುರಾತನ ಪೇಂಟಿಂಗ್‌ಗಳು ಇದರ ಮುಖ್ಯ ಆಕರ್ಷಣೆ. ಬಲ್ಗೇರಿಯನ್ನರ ಧಾರ್ಮಿಕ ಕ್ಷೇತ್ರ ರಿಲಾ ಮೊನಾಸ್ಟೆರಿಯ ಅತ್ಯಂತ ಪ್ರಸಿದ್ಧ ಸಂತ ಜಾನನ ಮತ್ತು ಬಲ್ಗೇರಿಯನ್ನರ ರಾಜ–ರಾಣಿ ಚಿತ್ರಗಳು ಇಲ್ಲಿವೆ. ರಾಣಿ ಇರಿನಾಳ ಮುಖವಂತೂ ಜೀವಂತವೆನಿಸುವಂತೆ ಕಾಣುತ್ತದೆ.

ಬಲ್ಗೇರಿಯಾದಲ್ಲಿ ಚರ್ಚುಗಳಿರುವಂತೆ